ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015-16 ದಿನಾಂಕ: 03-05-2016

## ಪತ್ರಿಕಾ ಪ್ರಕಟಣೆ

# REVISION OF TARIFF FOR SOLAR ROOFTOP AND SMALL PHOTOVOLTAIC POWER PLANTS

**Bangalore, May 3 (Karnataka Information)**

The Karnataka Electricity Regulatory Commission has issued an Order today revising the tariff payable for Solar Rooftop and small photovoltaic power generation. The revised tariff is applicable for PPA to be signed on or after 2nd May 2016 and upto 31st March, 2018 with plants being commissioned during this period, as follows:

| Capacity of Solar Rooftop and small photovoltaic power plants | Approved Tariff in Rs./unit (Without Capital Subsidy) | Approved Tariff in Rs./unit (With Capital Subsidy |
|---|---|---|
| 1 to 10kW | 7.08 | 6.03 |
| Above 10kW & upto 50kW | 6.61 | 5.63 |
| Above 50kW & upto 100kW | 6.14 | 5.23 |
| Above 100kW & upto 500kW | 5.67 | 4.83 |
| Above 500kW & upto 1000kW | 5.20 | 4.43 |

The salient features of the Order are as follows:

- The Commission has introduced gross metering for Domestic, Hospital and Educational institution Consumers wherein consumers are allowed to sell entire energy generated by their solar rooftop and small PV plants to the ESCOMs irrespective of their self-consumption.
- Net-metering is applicable for Industrial, Commercial and all categories of consumers other than Domestic, Hospital and Educational institution categories wherein consumers are allowed to sell surplus energy generated by their solar rooftop and small PV plants to the ESCOMs after self-consumption.
- The revision of tariff of solar rooftop and small PV plant is necessitated due to substantial decline in the capital cost.

- As the ESCOMs in the State have already signed Power Purchase Agreements for substantial capacity addition of solar power, the Commission in its present Order has decided to allow an aggregate capacity addition of only 400 MW by all the ESCOMs in the State for the effective period of this Order.

The copy of the Commission's Order is available on the KERC's website www.karnataka.gov.in/kerc

babu/km

## ಕೀ ಉತ್ತರ ಪ್ರಕಟ

**ಬೆಂಗಳೂರು, ಮೇ 3 (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಸೇವಾ ಆಯೋಗವು ಸರ್ಕಾರದ ವಿವಿಧ ಇಲಾಖೆಗಳಲ್ಲಿನ ತಾಂತ್ರಿಕ/ತಾಂತ್ರಿಕೇತರ ಹುದ್ದೆಗಳು ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತದಲ್ಲಿನ ಹುದ್ದೆಗಳಿಗೆ ನಡೆಸಲಾದ ಸ್ಪರ್ಧಾತ್ಮಕ ಪರೀಕ್ಷೆ/ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಗಳ ಕೀ ಉತ್ತರಗಳನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಆಯೋಗದ ವೆಬ್‌ಸೈಟ್ "http://kpsc.kar.nic.in/Key Answers" ನಲ್ಲಿ ಪ್ರಕಟಿಸಲಾಗಿದೆ.

ಕೀ ಉತ್ತರಗಳ ಕುರಿತಂತೆ ಆಕ್ಷೇಪಣೆಗಳನ್ನು ಸಲ್ಲಿಸುವ ಅಭ್ಯರ್ಥಿಗಳು ಅದನ್ನು ಪುಷ್ಠೀಕರಿಸುವ ಆಧಾರಗಳುಳ್ಳ ಪುಸ್ತಕಗಳ ಹೆಸರು, ಲೇಖಕರ ಹೆಸರು, ಪ್ರಕಾಶನದ ಪ್ರತಿ, ವಿಷಯ, ಪ್ರಶ್ನೆ ಪುಸ್ತಿಕೆಯ ಶ್ರೇಣಿ, ಪ್ರಶ್ನೆ ಸಂಖ್ಯೆ ಇತ್ಯಾದಿ ವಿವರಗಳು ಹಾಗೂ ಪ್ರತಿ ಪ್ರಶ್ನೆಗೆ 50 ರೂ. ಶುಲ್ಕದೊಂದಿಗೆ (ಐಪಿಒ/ಡಿಡಿ ಮೂಲಕ) "**ಪರೀಕ್ಷಾ ನಿಯಂತ್ರಕರು, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು**" ಇವರಿಗೆ ಕೀ–ಉತ್ತರದೊಂದಿಗೆ ಪ್ರಕಟಿಸಿದ ನಮೂನೆಯಲ್ಲಿ ದಿನಾಂಕ 07–05–2016 ರೊಳಗೆ (ಕಚೇರಿ ವೇಳೆಯಲ್ಲಿ) ಲಿಖಿತ ಮನವಿಯ ಮೂಲಕ (ದ್ವಿಪ್ರತಿಯಲ್ಲಿ) ಸಲ್ಲಿಸಬಹುದಾಗಿದೆ. ದಿನಾಂಕ 07–05–2016 ರ ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

**ಬಾಬು:ಜಿಪಿಆರ್.**

## ಮೇ ತಿಂಗಳ ಪಡಿತರ ಬಿಡುಗಡೆ

**ಬೆಂಗಳೂರು, ಮೇ 3 (ಕರ್ನಾಟಕ ವಾರ್ತೆ)**

ರಾಜ್ಯದಲ್ಲಿ ಸಾರ್ವಜನಿಕ ವಿತರಣಾ ಪದ್ಧತಿಯಡಿಯಲ್ಲಿ ನ್ಯಾಯಬೆಲೆ ಅಂಗಡಿಗಳ ಮೂಲಕ ಪಡಿತರ ಚೀಟಿದಾರರಿಗೆ ವಿತರಿಸುವ ಸಂಬಂಧ 2016 ಮೇ ಮಾಹೆಗೆ ಆಹಾರ ಧಾನ್ಯಗಳನ್ನು ಈ ಕೆಳಕಂಡ ಪ್ರಮಾಣ ಹಾಗೂ ದರದಲ್ಲಿ ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ.

ರಾಜ್ಯದ ಎಲ್ಲಾ ಜಿಲ್ಲೆಗಳ ಎಎವೈ ಪಡಿತರ ಚೀಟಿಗಳಿಗೆ 29 ಕೆ.ಜಿ. ಅಕ್ಕಿ ಹಾಗೂ 6 ಕೆ.ಜಿ. ಗೋಧಿ ಹಾಗೂ ಬಿಪಿಎಲ್ ಪಡಿತರ ಚೀಟಿಯ ಪ್ರತಿ ಸದಸ್ಯರಿಗೆ 4 ಕೆ.ಜಿ. ಅಕ್ಕಿ ಹಾಗೂ 1 ಕೆ.ಜಿ. ಗೋಧಿ ವಿತರಣಾ ಪ್ರಮಾಣ ನಿಗದಿಪಡಿಸಿ ಹಂಚಿಕೆ ಮಾಡಲಾಗಿದೆ.

ಎಎವೈ ಮತ್ತು ಬಿಪಿಎಲ್‌ನ ಪ್ರತಿ ಪಡಿತರ ಚೀಟಿಗೆ ತಾಳೆ ಎಣ್ಣೆ 1 ಲೀ. ರೂ 25/- ರಂತೆ ಆಯೋಡಿನ್‌ಯುಕ್ತ ಉಪ್ಪು ಒಂದು ಕೆ.ಜಿ. ರೂ 2 ರಂತೆ ಹಂಚಿಕೆಗೆ ನೀಡಲಾಗಿದೆ.

ನೋಂದಣಿಯಾದ ಎಪಿಎಲ್ ಪಡಿತರ ಚೀಟಿಯ ಏಕ ಸದಸ್ಯ ಕುಟುಂಬಕ್ಕೆ 4 ಕೆ.ಜಿ. ಆಹಾರಧಾನ್ಯವನ್ನು (3 ಕೆ.ಜಿ. ಅಕ್ಕಿ ಮತ್ತು 2 ಕೆ.ಜಿ. ಗೋಧಿ) ಹಾಗೂ ಒಂದಕ್ಕಿಂತ ಹೆಚ್ಚು ಸದಸ್ಯರಿರುವ ಕುಟುಂಬಕ್ಕೆ 10 ಕೆ.ಜಿ. ಆಹಾರ ಧ್ಯಾನವನ್ನು (5 ಕೆ.ಜಿ. ಅಕ್ಕಿ, 5 ಕೆ.ಜಿ. ಗೋಧಿ) ಪ್ರತಿ ಕೆ.ಜಿ. ಅಕ್ಕಿಗೆ ರೂ 15/- ಹಾಗೂ ಪ್ರತಿ ಕೆ.ಜಿ. ಗೋಧಿಗೆ ರೂ 10/- ರ ದರದಲ್ಲಿ ಹಂಚಿಕೆ ನೀಡಲಾಗಿದೆ.

ಎಎವೈ ಮತ್ತು ಬಿಪಿಎಲ್‌ನ ಏಕಸದಸ್ಯ ಮತ್ತು ದ್ವಿ ಸದಸ್ಯ ಅನಿಲ ರಹಿತ ಪಡಿತರ ಚೀಟಿಗಳಿಗೆ 3 ಲೀಟರ್‌ನಂತೆ, ಮೂರು ಮತ್ತು ಹೆಚ್ಚಿನ ಸದಸ್ಯರಿರುವ ಪಡಿತರ ಚೀಟಿಗಳಿಗೆ ಲೀಟರ್‌ನಂತೆ ಹಾಗೂ ಗ್ರಾಮಂತರ ಪ್ರದೇಶದ ಎಪಿಎಲ್ ಅನಿಲ ರಹಿತ ಪಡಿತರ ಚೀಟಿಗಳಿಗೆ 2 ಲೀಟರ್‌ನಂತೆ ಸೀಮೆಎಣ್ಣೆ ವಿತರಣಾ ಪ್ರಮಾಣವನ್ನು ನಿಗಧಿಪಡಿಸಿ ಪ್ರತಿ ಲೀಟರ್‌ಗೆ ರೂ 18/- ರ ದರದಲ್ಲಿ ವಿತರಿಸಲು ಹಂಚಿಕೆ ನೀಡಲಾಗಿದೆ.

**ಬಾಬು:ಜಿಪಿಆರ್.**